ರೊಡನೆ ನಡೆಸಿದ ಚರ್ಚೆಯಲ್ಲಿ ಸಂಸ್ಥೆಯವರ ಪರತ್ತುಗಳಿಗೆ ಸಂಘದವರು ಸಮ್ಮತಿ ಸೂಚಿಸಿಲ್ಲವಾದ್ದರಿಂದ ಯಾವುದೇ ತೀರ್ಮಾನವನ್ನು ಕೈಗೊಂಡಿಲ್ಲ.

ಶ್ರೀ ಎ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ೧೩-೧೨-೧೯೫೫ರಲ್ಲಿ ಮಾನ್ಯ ಸಾರಿಗೆ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ, ಅದು ಈ ರೀತಿ ಇದೆ,

> "The State Government will soon introduce passes with coupens for its employees to travel by KSRTC Buses."

ಇದಾದ ನಂತರ ಮಾನ್ಯ ಸಿಧ್ಯ ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಏನೆಂದರೆ,

> "KSRTC authorities would work out the details like quantum of concession to be given to the employees while issuing passes...etc.

ಎಂದು. ಈಗಲೂ ಸಹ ಮಾನ್ಯ ಮಂತ್ರಿಗಳು ಇದೇ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಸೌಲಭ್ಯವನ್ನು ರಾಜ್ಯಸರ್ಕಾರದ ನೌಕರರಿಗೆ ಕೊಡುವುದರಿಂದ ಸರ್ಕಾರಕ್ಕೆ ಆರ್ಥಿಕ ಕಾರ್ಪೊರೇಷನ್‌ಗೆ ಯಾವುದೇ ರೀತಿಯ ನಷ್ಟವಾಗುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಜಾರಿಗೆ ತರುವ ಬಗ್ಗೆ ಮಾನ್ಯ ಸಾರಿಗೆ ಸಚಿವರು ೧೯೮೫ರಲ್ಲಿಯೇ ಹೇಳಿಕೆ ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಜಾರಿಗೆ ತರದಿರಲು ಕಾರಣವೇನು ? ಇದನ್ನು ಜಾರಿಗೆ ತರುವ ವಿಚಾರದಲ್ಲಿ ಯಾವ ಕಂಡೀಷನ್‌ಗಳನ್ನು ಇವರು ನೌಕರರ ಸಂಘದ ಮೇಲೆ ಹಾಕಿದ್ದಾರೆಂಬುದನ್ನು ಮಾನ್ಯಮಂತ್ರಿಗಳು ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಒಂದು ಆಜ್ಞೆ ಹೊರಡಿಸಿದ್ದು ನಿಜ. ಇದರ ಬಗ್ಗೆ ಅಡಿಷನಲ್ ಚೀಫ್-ಸೆಕ್ರೆಟರಿ ಅವರು ಸಾರಿಗೆ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ಸಂಘದ ಮುಖಂಡರೊಡನೆ ಮಾತುಕತೆ ನಡೆಸಿದ್ದಾರೆ. ಆದರೆ ಇನ್ನೂ ಹೊಂದಾಣಿಕೆ ಆಗಿಲ್ಲ. ಚರ್ಚೆ ಇನ್ನೂ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎ. ಕೃಷ್ಣಪ್ಪ.—ನೌಕರರ ಸಂಘದ ಮುಖಂಡರಿಗೆ ಸಾರಿಗೆ ಸಂಸ್ಥೆಯವರು ಯಾವ ಯಾವ ಕಂಡೀಷನ್‌ಗಳನ್ನು ಈ ಬಗ್ಗೆ ಹಾಕಿದ್ದಾರೆಂಬುದನ್ನು ತಾವು ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—೫ ಪರ್ಸೆಂಟ್ ರಿಬೇಟ್ ಮೇಲೆ ಕೊಡಬೇಕು ಎಂದು ಕೇಳುತ್ತಾ ಇದ್ದಾರೆ. ಕೆ. ಎಸ್. ಆರ್. ಟಿ. ಸಿ. ಯವರು ೫-೦೦ ರೂಪಾಯಿ ಕನ್ಸೆಷನ್ ಕೊಡುತ್ತೇವೆಂದು ಸಲಹೆ ಕೊಟ್ಟಿದ್ದಾರೆ. ಇದರಲ್ಲಿ ಕೆ. ಎಸ್. ಆರ್. ಟಿ. ಸಿ. ಗೆ ನಷ್ಟವಾಗುತ್ತದೆ ನಿಜ. ಅದು ಎಷ್ಟು, ಏನು ಎನ್ನುವುದು ಮುಖ್ಯ.

ಅಧ್ಯಕ್ಷರು.—ಶ್ರೀ ಪ್ರಭಾಕರ ರಾಣೆ ಮತ್ತು ಶ್ರೀಪತಿ ಲೀಲಾದೇವಿ ಪ್ರಸಾದ್ ಅವರ ಪ್ರಶ್ನೆಗಳನ್ನು ಆಮೇಲೆ ತೆಗೆದುಕೊಳ್ಳೋಣ. ಮಾನ್ಯ ಮುಖ್ಯ ಮಂತ್ರಿಗಳು ಈಗ ಹೊರಗಡೆ ಹೋಗುತ್ತಾರೆ, ಆದ್ದರಿಂದ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಈಗ ತೆಗೆದುಕೊಳ್ಳೋಣ.

ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಿರುವ ಬಗ್ಗೆ

೬೧೧. ಶ್ರೀಮತಿ ಕೆ.ಎಸ್. ನಾಗರತ್ನಮ್ಮ, (ಗುಂಡ್ಲುಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭ನೇ ಸಾಲಿನಲ್ಲಿ ಸರ್ಕಾರಿ ಸೇವಾ ನಿಯಮಾವಳಿ ೨೫೫ರ ಮೇರೆಗೆ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ಸೇವೆಯಿಂದ ನಿವೃತ್ತಿಗೊಳಿಸಿರುವ ನೌಕರರ ಒಟ್ಟು ಸಂಖ್ಯೆ ಎಷ್ಟು ? (ಅವರ ಹೆಸರು, ಇಲಾಖೆ ಮತ್ತು ಹುದ್ದೆಗಳನ್ನು ತಿಳಿಸುವುದು),

ಆ ಸದರಿ ನೌಕರರುಗಳನ್ನು ಯಾವ ಯಾವ ಕಾರಣಗಳ ಮೇಲೆ ನಿವೃತ್ತಿಗೊಳಿಸಲಾಗಿದೆ ? (ಪತ್ರಿಯೊಬ್ಬ ನೌಕರನ ಕಾರಣಗಳನ್ನು ನಿವೃತ್ತಿಯ ಆಧಾರದ ಮೇಲೆ ತಿಳಿಸುವುದು)

೩) ನಿಯಮಾವಳಿಗೆ ಒಳಪಡುವ ಸರ್ಕಾರಿ ನೌಕರರು ಇನ್ನೂ ಬಹಳ ಜನ ಇದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಅಂತಹವರುಗಳನ್ನು ಗುರ್ತಿಸುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಜೂನ್ ೧೯೮೫ ರಿಂದ ಜುಲೈ ೧೯೮೭ರ ಅಂತ್ಯದವರೆಗೆ ೧೧೧ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ. ಈ ರೀತಿ ನಿವೃತ್ತಿಗೊಳಿಸಲಾಗಿರುವ ನೌಕರರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ೧೯೮೭ರ ಸಾಲಿನಲ್ಲಿ ನಿವೃತ್ತಿಗೊಳಿಸಿರುವ ನೌಕರರ ಬಗ್ಗೆ ನಿರ್ದಿಷ್ಟ ಮಾಹಿತಿ ಸಧ್ಯಕ್ಕೆ ಲಭ್ಯವಿಲ್ಲ.

ಆ) ಸರ್ಕಾರಿ ಸೇವೆಯಲ್ಲಿ ೫೫ ವರ್ಷ ಸೇವೆ ಸಲ್ಲಿಸಿದೆ ಅಥವಾ ೫೦-೫೫ ವರ್ಷ ತುಂಬಿರುವ ಅಸಮರ್ಥರಾದ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗುವುದು. ಈ ರೀತಿ ನಿವೃತ್ತಿ ಮಾಡಲು ನಿರ್ಧಾರ ತೆಗೆದುಕೊಳ್ಳುವ ಮುನ್ನ ಇದರ ಸಲುವಾಗಿ ರಚಿಸಲ್ಪಡುವ ಇಲಾಖಾ ಪರಿಶೀಲನಾ ಸಮಿತಿಗಳು ಸಂಬಂಧಪಟ್ಟ ಸರ್ಕಾರಿ ನೌಕರನ ರಹಸ್ಯ ವರದಿಗಳಲ್ಲಿ ಆ ನೌಕರನ ಸೇವಾ ವಿವರಗಳನ್ನು ಪರಿಶೀಲಿಸುವುದರ ಜೊತೆಗೆ ಆ ನೌಕರನ ಸೇವಾ ತತ್ಪರತೆ ಮತ್ತು ಸಮರ್ಥತೆ ಹಾಗೂ ಲಭ್ಯವಿರುವ ಎಲ್ಲಾ ರಹಸ್ಯ ವರದಿಗಳಲ್ಲಿ ಒಟ್ಟಾರೆ ಅವನ ಸೇವಾ ವಿವರಗಳನ್ನು ಪರಿಗಣನೆಗೆ ತೆಗೆದುಕೊಂಡು ಕಡ್ಡಾಯ ನಿವೃತ್ತಿ ಮಾಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡುತ್ತವೆ. ಈ ಶಿಫಾರಸಿನ ಆಧಾರದ ಮೇಲೆ ಅನುಬಂಧದಲ್ಲಿ ತೋರಿಸಿರುವ ನೌಕರರನ್ನು ನಿವೃತ್ತಿಗೊಳಿಸಲಾಗಿದೆ.

೪) ಈ ನಿಯಮಾವಳಿಗೆ ಒಳಪಡುವ ಸರ್ಕಾರಿ ನೌಕರರು ಇನ್ನೂ ಇರಬಹುದು. ಅಂತಹ ನೌಕರರನ್ನು ಸರ್ಕಾರ ರಚಿಸಿರುವ ಇಲಾಖಾ ಪರಿಶೀಲನೆ ಸಮಿತಿಗಳು ವರ್ಷಕ್ಕೆ ಎರಡು ಬಾರಿ ಸಭೆ ಸೇರಿ ಗುರುತಿಸಲಾಗುವುದು.

ಅನುಬಂಧ

ಇಲಾಖೆ		ಹೆಸರು : ಪದನಾಮ	ಶ್ರೇಣಿ
		ಶ್ರೇಯಾಂತರಗಳು	
ಕೃಷಿ ಮಂತ್ರಿ ತೋಟಗಾರಿಕೆ	೧	ಜಿ. ದಾಸೇಗೌಡ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ	ಗ್ರೂಪ್-ಎ
	೨	ಎಸ್. ಆರ್. ಶೇಷಾಚಲರಾವ್	ಗ್ರೂಪ್-ಬಿ
	೩	ಎಸ್. ವಿ. ಕುಲಕರ್ಣಿ	
	೪	ಟಿ. ಕೆ. ಮೊಹಮದ್ ಇಕ್ರಮುಲ್ಲ	
	೫	ಕೆ. ಚೆನ್ನಕೇಶವ	
	೬	ಟಿ. ಹೊನ್ನೇಗೌಡ	
	೭	ಜೆಟ್. ಬಾಪೂರಾವ್	
ವಾಣಿಜ್ಯ ಮತ್ತು ಕೈಗಾರಿಕೆ	೧	ಆರ್. ರಾಮಯ್ಯ, ಬೈರಿಗೆದಾರ	ಗ್ರೂಪ್-ಸಿ
ಖಾರ್ವಾ, ಪ್ರವಾಸೋದ್ಯಮ ಮತ್ತು ಯಾತ್ರಿಕರ ಸೇವೆ	೧	ನರಸಿಂಹಯ್ಯ, ಹಿರಿಯ ವಾಹನ ಚಾಲಕ	ಗ್ರೂಪ್-ಸಿ
ಗೃಹ ಇಲಾಖೆ	೧	ಪೋಲೀಸ್ ಸಬ್ ಇನ್ಸ್‌ಪೆಕ್ಟರ್	-೫
	೨	ಹೆಡ್ ಕಾನ್ಸ್‌ಟೇಬಲ್	-೨೬
	೩	ಪೋಲೀಸ್ ಕಾನ್ಸ್‌ಟೇಬಲ್ಸ್	-೧
	೪	ಪ್ರಥಮ ದರ್ಜೆ ಸಹಾಯಕ (ಇವರ ಹೆಸರುಗಳು ಲಭ್ಯವಿಲ್ಲ)	-೧

ಕಾನೂನು ಮತ್ತು ಸಂಸದೀಯ ವ್ಯವಹಾರ	೧	ಎಚ್. ಎನ್. ಅನಂತರಾವ್ ಸಹಾಯಕ ಸರ್ಕಾರಿ ಅಭಿಯೋಜಕ	ಗ್ರೂಪ್–ಬಿ
	೨	ಪಿ. ವೀರಪ್ಪ ಸಹಾಯಕ ಸರ್ಕಾರಿ ಅಭಿಯೋಜಕ	ಗ್ರೂಪ್–ಬಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್	೧	ಪಿ. ಹನುಮಂತಯ್ಯ ಸೀನಿಯರ್ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಅಸಿಸ್ಟೆಂಟ್	ಗ್ರೂಪ್–ಎ
	೨	ಟಿ. ವೆಂಕಟಪ್ಪ, ಡಿಸ್ಟ್ರಿಕ್ ಡೆವಲಪ್‌ಮೆಂಟ್ ಅಸಿಸ್ಟೆಂಟ್	ಗ್ರೂಪ್–ಎ
	೩	ವಿ. ಎಂ. ಘಾಟ್ಗಿ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್	ಗ್ರೂಪ್–ಎ
	೪	ಶ್ರೀಮತಿ ಎ. ಶಶಿಕಲ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್	ಗ್ರೂಪ್–ಎ
	೫	ಮಂಚಯ್ಯ, ಗ್ರಾಮಸೇವಕ	ಗ್ರೂಪ್–ಸಿ
	೬	ಕೆ. ಎಂ. ಶಾಂತವೀರಯ್ಯ, ಗ್ರಾಮಸೇವಕ (ಇವರ ಪೈಕಿ ಶ್ರೀ ಹನುಮಂತಯ್ಯನವರನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆದೇಶದ ಪ್ರಕಾರ ಮತ್ತೆ ಸೇವೆಗೆ ಹಿಂತೆಗೆದು ಕೊಳ್ಳಲಾಗಿದೆ	ಗ್ರೂಪ್–ಸಿ
ಸಮಾಜ ಕಲ್ಯಾಣ ಮತ್ತು ಕಾರ್ಮಿಕ	೧	ವಿ. ಗೋವಿಂದರಾಜು, ಉಪ ನಿರ್ದೇಶಕ	ಗ್ರೂಪ್–ಎ
	೨	ಚಿಲುವರಾಜ್, ಸಹಾಯಕ ಕಾರ್ಮಿಕ ಆಯುಕ್ತರು	ಗ್ರೂಪ್–ಎ
	೩	ಚಂದ್ರಶೇಖರಯ್ಯ ಪಿ. ಉದ್ಯೋಗಾಧಿಕಾರಿ	ಗ್ರೂಪ್–ಬಿ
	೪	ಎಸ್. ಎಂ. ಲೋನಿಕರ್, ಅಧೀಕ್ಷಕರು	ಗ್ರೂಪ್–ಬಿ
	೫	ಎಲ್. ಕೆ. ಸಿಂಗ್. ಅಧೀಕ್ಷಕರು	ಗ್ರೂಪ್–ಬಿ
	೬	ಆರ್. ಎಲ್. ಹುಯಿಲ್‌ಗೋಲ್ ಸಮಗ್ರ ಬಾಲವಿಕಾಸ ಯೋಜನಾಧಿಕಾರಿ	ಗ್ರೂಪ್–ಬಿ
	೭	ಅಮೀರ್ ಜಾನ್, ಗ್ರೂಪ್ ಇನ್‌ಸ್ಪೆಕ್ಟರ್	ಗ್ರೂಪ್–ಸಿ
	೮	ಎನ್. ವಿ. ಜಯರಾಮ್, ಸೀನಿಯರ್ ಇನ್‌ಸ್ಪೆಕ್ಟರ್	ಗ್ರೂಪ್–ಸಿ
	೯	ವಿ. ಪಿ. ಪ್ರಭು ಸೈನೋಗ್ರಫಿ ಇನ್‌ಸ್ಪೆಕ್ಟರ್	ಗ್ರೂಪ್–ಸಿ
ಪಶುಸಂಗೋಪನೆ, ವಿಜ್ಞಾನಗಾರಿಕೆ ಮತ್ತು ಅರಣ್ಯ ಇಲಾಖೆ	೧	ಖಾಜಾ ಮೊಹಿನುದ್ದೀನ್, ಪ್ರಥಮ ದರ್ಜೆ ಸಹಾಯಕ	ಗ್ರೂಪ್–ಸಿ
	೨	ಹಿಡ್ಡೇಗೌಡ, ಪಶುಪರೀಕ್ಷಕ ಗ್ರೇಡ್–೨	ಗ್ರೂಪ್–ಸಿ
	೩	ಗುಂಡಪ್ಪ, ಪಶುಪರೀಕ್ಷಕ	ಗ್ರೂಪ್–ಸಿ
	೪	ಅಬ್ದುಲ್ ಸಾಭಿ	ಗ್ರೂಪ್–ಡಿ
	೫	ಚಿನ್ನದೊರೈ	—, ,—
	೬	ವೆಂಕಟಸ್ವಾಮಿ	—, ,—
	೭	ವೆಂಕಟ	—, ,—
	೮	ಪಾಪಯ್ಯ	—, ,—

ಸಹಕಾರ ಇಲಾಖೆ	೧	ಎಸ್. ಎಸ್. ವಿರಕ್ತಮಠ, ಸ. ಸ. ಸಹಾಯಕ ನಿಬಂಧಕ	ಗ್ರೂಪ್–ಬಿ
	೨	ಡಿ. ಎಸ್. ನಂದಗಡ	
	೩	ಬಿ. ವಸಂತ	
	೪	ಬಿ. ಚಂದ್ರಶೇಖರ್, ಸಹಾಯಕ ನಿಯಂತ್ರಕರು	
	೫	ಡಿ. ಸೂರ್ಯನಾರಾಯಣಮೂರ್ತಿ	ಗ್ರೂಪ್–ಸಿ
	೬	ವಿಲೀಲಲ್ಲ	–, ,–
	೭	ಎಂ. ಎನ್. ಶ್ರೀಕಂಠಯ್ಯ	–, ,–
	೮	ಟಿ. ವಿ. ಸ್ವಾಮಿ	–, ,–
	೯	ಕೆ. ಎಂ. ಚಿಕ್ಕಣ್ಣ ಶೆಟ್ಟಿ	–, ,–
	೧೦	ಕೆ. ಪಿ. ಲಾವಪ್ಪ	–, ,–
	೧೧	ಕೃಷ್ಣಶೆಟ್ಟಿ	–, ,–
	೧೨	ಕೆ. ಜೆ. ಬೆಟ್ಟೇಗೌಡ	–, ,–
	೧೩	ಎಸ್. ಎಸ್. ನಿಡೋನಿ	–, ,–
	೧೪	ವೈ. ಬಿ. ಬೆಕ್ಕಿನಾಲಕರ್	–, ,–
	೧೫	ಬಿ. ಬಿ. ಪಾಟೀಲ್	–, ,–
	೧೬	ಕೆ. ಎಸ್. ದಾಸಪ್ರಕಾಶ್	–, ,–

ಶಿಕ್ಷಣ ಇಲಾಖೆ

೬ ಜನ ಸಹಾಯಕ ಶಿಕ್ಷಕರನ್ನು ನಿವೃತ್ತಿ ಮಾಡ ಲಾಗಿದ್ದು ಇವರ ಪೈಕಿ ೫ ಜನ ಸಹಾಯಕ ಶಿಕ್ಷಕ ರನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ತೀರ್ಪಿನ ಮೇರೆಗೆ ಸೇವೆಯಲ್ಲಿ ಮತ್ತೆ ಮುಂದುವರೆಸಲಾಗಿದೆ. ಉಳಿದೊಬ್ಬರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಸರ್ಕಾರದ ಸಚಿವಾಲಯ	೧	ಹಿರಿಯ ಸಹಾಯಕ	೧	ಗ್ರೂಪ್–ಸಿ
	೨	ಸಹಾಯಕ	೧	ಗ್ರೂಪ್–ಸಿ
ಕಂದಾಯ ಇಲಾಖೆ	೧	ಶಿರಸ್ತೇದಾರ	೩	ಗ್ರೂಪ್–ಸಿ
	೨	ಪ್ರಥಮ ದರ್ಜೆ ಸಹಾಯಕ	೨	ಗ್ರೂಪ್–ಸಿ
	೩	ವಾಹನ ಚಾಲಕ	೧	ಗ್ರೂಪ್–ಸಿ
	೪	ಗ್ರಾಮ ಲೆಕ್ಕಿಗ	೧೦	ಗ್ರೂಪ್–ಸಿ
	೫	ನಾಲ್ಕನೆ ದರ್ಜೆ ನೌಕರರು	೧೦	ಗ್ರೂಪ್–ಡಿ

(ಇವರ ಹೆಸರುಗಳು ಲಭ್ಯವಿಲ್ಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ — ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನನಗೆ ಕೆಲವು ಕಾಗದಗಳು ಬಂದವು. ಚಿಕ್ಕ ಚಿಕ್ಕ ನೌಕರರು ಳನೇ ದರ್ಜೆ, ೩ನೇ ದರ್ಜೆ — ಇಂತಹ ನೌಕರರುಗಳು ಎಲ್.ಟಿ.ಸಿ. ಸೌಲಭ್ಯ ತೆಗೆದುಕೊಂಡು ಆದಮೇಲೆ ಅದರ ದುಡ್ಡು ಕಟ್ಟಿಲ್ಲ ಎಂತಲೂ, ದುಡ್ಡು ಕಟ್ಟಿದ ಮೇಲೆ ಅವರ ಮೇಲೆ ಗೂಬೆ ಕೂರಿಸಿ ಅವರನ್ನು ತೆಗೆದಿರುವ ಸಂಗತಿಗಳಿವೆ. ಅಷ್ಟೇ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು, 'ರಹಸ್ಯ ವರದಿಗಳಲ್ಲಿ ಆ ನೌಕರನ ಸೇವಾ ವಿವರಗಳನ್ನು ಪರಿಶೀಲಿಸುವುದರ ಜೊತೆಗೆ ಆ ನೌಕರನ ಸೇವಾ ತತ್ಪರತೆ ಮತ್ತು ಸಮರ್ಥತೆ ಹಾಗೂ ಲಭ್ಯವಿರುವ ಎಲ್ಲಾ ರಹಸ್ಯ ವರದಿಗಳಲ್ಲಿ ಒಟ್ಟಾರೆ ಅವನ ಸೇವಾ ವಿವರಗಳನ್ನು ಕನ್ಸಿಡರ್ ಮಾಡುತ್ತೇವೆ' ಎಂದು ಹೇಳಿದ್ದಾರೆ. ರಹಸ್ಯ ವರದಿ ಬರೆಯುವಾಗಲೇ ಅನು ಮಾನ ಬರುವುದು, ಅವರ ಕೈ ಸವರುವುದು ಇಂತಹ ಪರಿಸ್ಥಿತಿ ಇದೆ. ಆದುದರಿಂದ ತಮ್ಮಿಳುನಾಡಿನಲ್ಲಿ ಇದನ್ನು ರದ್ದೇ ಮಾಡಿದ್ದಾರೆ. ಆ ರೀತಿ ಏನಾದರೂ ಮಾಡುತ್ತೀರಾ? ಏಕೆಂದರೆ ರಹಸ್ಯ ವರದಿ ಬರೆಯುವಾಗಲೇ ಎಲ್ಲಾ ತುಂಬಿ ಹೋಗುತ್ತದೆ. ಆದುದರಿಂದ ತಾವು ಕೊಟ್ಟರುವ ವರದಿಯಲ್ಲಿ ಸಣ್ಣ ಪುಟ್ಟ

ನೌಕರರ ವಿವರ ಕೊಟ್ಟಿದ್ದೀರೇ ಹೊರತು ದೊಡ್ಡವರು ಯಾರೂ ಕಾಣುತ್ತಾ ಇಲ್ಲ. ಅವರ ವರದಿ ತರಿಸುವುದಕ್ಕೆ ಏರ್ಪಾಟು ಮಾಡುತ್ತೀರಾ, ಇಲ್ಲದಿದ್ದರೆ ಈ ಅಭ್ಯಾಸವನ್ನು ಕಂಪ್ಲೀಟಾಗಿ ತೆಗೆಯುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.— ಈ ರಹಸ್ಯ ವರದಿ ಎಷ್ಟರ ಮಟ್ಟಿಗೆ ವಸ್ತು ನಿಷ್ಠವಾಗಿರಬಹುದು ಎನ್ನುವುದರ ಬಗ್ಗೆ ಮತಭೇದ ಇರಬಹುದು. ಆದರೆ ಈ ಪದ್ಧತಿಯನ್ನು ತೆಗೆದುಹಾಕತಕ್ಕಂಥಾದ್ದು ಸರಿಯಲ್ಲ ಎಂದು ನನ್ನ ಭಾವನೆ. ತಮಿಳುನಾಡಿನಲ್ಲಿ ರದ್ದು ಮಾಡಿರಬಹುದು. ಇದು ಬಹಳ ವರ್ಷಗಳಿಂದಲೂ ಅಂದರೆ ಈ ಸರ್ಕಾರದ ಆಡಳಿತ ಪ್ರಾರಂಭವಾದಂದಿನಿಂದಲೂ ಈ ಪದ್ಧತಿ ನಡೆದುಕೊಂಡು ಬಂದಿದೆ. ಇದನ್ನು ತೆಗೆದುಹಾಕಿದರೆ ನಾವು ಯಾವ ಸರ್ಕಾರಿ ನೌಕರ ಯಾವ ರೀತಿ ಕೆಲಸ ಮಾಡಿದ್ದಾನೆ, ಅವನ ಸಾಮರ್ಥ್ಯ ಏನು, ಅವನ ಯೋಗ್ಯತೆ ಏನು ಮತ್ತು ಅವನು ಪ್ರಾಮಾಣಿಕನೋ ಅಥವಾ ಅಪ್ರಾಮಾಣಿಕನೋ, ವಸ್ತುನಿಷ್ಠನಾಗಿರುತ್ತಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳತಕ್ಕ ಬಗೆ ಹೇಗೆ? ಇದನ್ನು ತಿಳಿದುಕೊಳ್ಳುವವರು ಅವನ ಮೇಲೆ ಇರತಕ್ಕಂಥ ಅಧಿಕಾರಿ, ಯಾರ ಕೆಳಗಡೆ ಕೆಲಸ ಮಾಡಿರುತ್ತಾನೋ ಅವರು ತಿಳಿದುಕೊಳ್ಳುತ್ತಾರೆ. ಇದು ನೂರಕ್ಕೆ ನೂರರಷ್ಟು ವಸ್ತು ನಿಷ್ಠವಾಗಿರುತ್ತದೆ ಅಥವಾ ಅವರ ಮನಸ್ಸಿನಲ್ಲಿ ಪ್ರಜುಡೀಸ್ ಆಗಲಿ ಪ್ರೆಜಿಲಿಕ್ಷನ್ ಆಗಲಿ ಇಲ್ಲವೇ ಇಲ್ಲ ಎಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಆದರೆ ಇರಬಹುದು ಅವರಿಗೆ ಒಬ್ಬರ ಮೇಲೆ ಹೆಚ್ಚು ಪ್ರೀತಿ ಇರಬಹುದು, ಇನ್ನೊಬ್ಬರ ಮೇಲೆ ಕಡಿಮೆ ಪ್ರೀತಿ ಇರಬಹುದು. ಆದರೆ ಈ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ. ಸಾಮಾನ್ಯವಾಗಿ ವರದಿ ವಸ್ತು ನಿಷ್ಠವಾಗಿರಬೇಕು ಎಂದು ಹೇಳುತ್ತೇನೆ. ಇನ್ನು ಎರಡನೆಯದು ಅಂದರೆ, ಎಲ್ಲರೂ ಚಿಕ್ಕಚಿಕ್ಕ ಸಣ್ಣ ಪುಟ್ಟ ನೌಕರರು ಎಂದು ಹೇಳುವುದು ಸರಿಯಲ್ಲ. ಎ ಗ್ರೂಪ್ ಬಿ ಗ್ರೂಪ್ ನವರು ಇದ್ದಾರೆ. ಡಿ ಗ್ರೂಪ್‌ನವರು ಕಡಿಮೆ ಇದ್ದಾರೆ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಇಲ್ಲ.

ವಿಶ್ವ ಬ್ಯಾಂಕ್‌ನಿಂದ ಪಡೆಯುವ ಸಾಲ, ಕ್ರಮ ಬಗ್ಗೆ.

ಪ್ರಶ್ನೆ. ಶ್ರೀ ಎನ್. ಎಸ್. ಕಡಪಟ್ಟಿ.— ಮಾನ್ಯ ಮಂಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರಸರ್ಕಾರ ಹಾಗೂ ರಾಜ್ಯಗಳು ತಮ್ಮ ರಾಜ್ಯಗಳಲ್ಲಿಯ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನಿಂದ ಪಡೆಯುವ ಸಾಲದ ಹಣದಲ್ಲಿ ತಾನು ಇಟ್ಟುಕೊಳ್ಳುವ ಹಣದ ಪ್ರಮಾಣ ಎಷ್ಟು?

ಆ) ವಿಶ್ವ ಬ್ಯಾಂಕ್ ಅಂತಹ ಸಾಲಗಳ ಮೇಲೆ ಹಾಕುವ ಬಡ್ಡಿ ಹಾಗೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಹಾಕುವ ಬಡ್ಡಿಯಲ್ಲಿ ವ್ಯತ್ಯಾಸ ಇದ್ದರೆ ಅದು ಎಷ್ಟು, ಹಾಗೂ ಈಗ ಚಾಲ್ತಿ ಸಾಲಗಳಿಗೆ ಕೊಡುತ್ತಿರುವ ಬಡ್ಡಿ ವಿವರ ಒದಗಿಸುವುದೆ.

ಇ) ಬ್ಯಾಂಕ್ ರಾಜ್ಯದ ಯೋಜನೆಗಳಿಗೆ ಯೋಜನೆಯ ಶೇಕಡಾ ಎಷ್ಟು ಪ್ರಮಾಣದ ಹಣ ಕೊಡುವರು (ವಿವರ ಒದಗಿಸುವುದು),

ಈ) ವಿಶ್ವ ಬ್ಯಾಂಕ್ ಆಯಾ ಯೋಜನೆಗಳ ಪೂರ್ತಿ ಮೊತ್ತ ಕೊಡದಿದ್ದರೆ ಹಾಗೂ ಅದರಲ್ಲಿಯೇ ಕೇಂದ್ರ ಸರ್ಕಾರ ಕೆಲವು ಪ್ರಮಾಣ ತನ್ನಲ್ಲಿಟ್ಟುಕೊಂಡಲ್ಲಿ ದಂಸ್ಥಿತಿಯಲ್ಲಿದ್ದ ರಾಜ್ಯಗಳ ಹಣಕಾಸಿನಲ್ಲಿ ಯೋಜನೆಗಳ ತ್ವರಿತ ಕಾರ್ಯಾಚರಣೆ ಕುಂಠಿತವಾಗುವುದಿಲ್ಲವೇ ಹಾಗೂ ಬಡ್ಡಿಯ ವ್ಯತ್ಯಾಸವಿದ್ದಲ್ಲಿ ಅದು ರಾಜ್ಯಗಳಿಗೆ ಭಾರವಾಗುವುದಿಲ್ಲವೇ?

ಉ) ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು ಸರ್ಕಾರದವರು ತೆಗೆದುಕೊಂಡ ಕ್ರಮ ಏನು ವಿವರವಾಗಿ ತಿಳಿಸುವುದು?

ಶ್ರೀ ರಾಮಕೃಷ್ಣ ಹೆಗಡೆ (ಮಂಖ್ಯ ಮಂತ್ರಿಗಳು).—

ಅ) ವಿಶ್ವ ಬ್ಯಾಂಕ್‌ನ ಸಾಲಗಳು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭಾರತ ಸರ್ಕಾರಕ್ಕೆ ಕೊಡಲಾಗುತ್ತದೆ. ಈ ರೀತಿ ಬಂದ ಹಣದ ಶೇಕಡಾ ೭೦ರಷ್ಟು ಭಾಗವನ್ನು ರಾಜ್ಯಗಳಿಗೆ ವಹಿಸಿಕೊಡಲಾಗುವುದು.

ಆ) ಭಾರತ ಸರ್ಕಾರಕ್ಕೆ ವಿಶ್ವ ಬ್ಯಾಂಕಿನಿಂದ ಸಿಕ್ಕುವ ಸಾಲದ ದರವು ಲಭ್ಯವಿರುವ ಮೂಲಗಳನ್ನು ಮತ್ತು ಯೋಜನೆಗಳನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ಇದು ಸಾಮಾನ್ಯವಾಗಿ ಶೇಕಡಾ